ಇಷ್ಟಗಲವಾಯ್ತು. ಥತ್ತೇರಿ! ತಲೆ ಕೊಡವಿ, ‘ಒಂದು ಸ್ಟ್ರಾಂಗ್ ಕಾಫಿ ಮಾಡ್ತೇನೆ ಮುಂಚೆ. ಬಿಸಿ ಡೋಸು ಬಿದ್ದ ಮೇಲೇನೇ ಸರಿಯಾಗಿ ಓಡುತ್ತೆ ಮಿದುಳು’ ಅಂತಂದುಕೊಂಡು ಅಡುಗೆ ಮನೆಗೆ ಬಂದು ಗ್ಯಾಸಿಗೆ ಪಾತ್ರೆಯೇರಿಸುವಾಗಲೇ ಮೊಬೈಲಿಗೆ ಪಳಕ್ ಅಂತ ಸಂದೇಶ.

ನೋಡಿದ್ರೆ ನಿಖಿಲಂದು, ‘ಮಿಸ್ಸಿಂಗ ಯು, ಡೆಸಪರೇಟ್ ಟು ಸೀ ಯೂ!’ ಅಂತ ಹಾಕಿದ್ದಾನೆ. ಮೈ ಜುಮ್ ಅಂದಿತು. ‘ನಾಳೆ ಸಂಜೆ ಪಿವಿಆರ್‌ನಲ್ಲಿ ತುಂಬಾ ಒಳ್ಳೆಯ ಶೋ ಇದೆ ಬರ್ತೀರಾ?’ ಅಂತ ಬೆಳಿಗ್ಗೆಯೇ ಅವನ ಸಂದೇಶ ಬಂದಿತ್ತು. ಕಾಲೇಜಿನ ಗಲಾಟೆಯಲ್ಲಿ ಒಮ್ಮೆ ನೋಡಿ ಪಟ್ಟನೆ ಮುಚ್ಚಿಟ್ಟುಬಿಟ್ಟಿದ್ದಳು. ನಿಧಾನವಾಗಿ ಕುಳಿತು ನಾಲ್ಕಾರು ಬಾರಿ ಓದಿ ಅದಕ್ಕೆ ಮತ್ತಿನ್ನೇನಾದ್ರೂ ಅರ್ಥ ಹುಟ್ಟುತ್ತಾ ಅಂತ ಯೋಚಿಸುವಾಗ್ಲೇ ಈ ಕಳ್ಳ ಬರಬೇಕೇ?

‘ಕಾಲೇಜು ಲೆಕ್ಚರುಗಳಿಗೆಲ್ಲ ಕಂಪ್ಯುಟರ್ ಜ್ಞಾನ ಅನ್ನೋದು ಮಸ್ಟು, ಕನಿಷ್ಠ ಎಮ್‌ಎಸ್‌ವರ್ಡು, ಎಕ್ಸೆಲ್‌ನಲ್ಲಾದರೂ ನಮ್ಮ ಜನ ಸರೀ ತಯ್ಯಾರಾಗಬೇಕಪ್ಪಾ. ಇಲ್ಲಾಂದ್ರೆ ಬರ್ತಾ ಬರ್ತಾ ನಮ್ಮ ಕಾಲೇಜಿನ ಅಡ್ಮಿಶನ್ನು ಕಮ್ಮಿಯಾಗುತ್ತೆ’ ಅಂತ ಕಳೆದ ತಿಂಗಳು ಪ್ರಿನ್ಸಿಪಾಲ್ ಶೆಣೈ ಹೇಳಿದಾಗ ಯಾರೂ ಹೆಚ್ಚು ತಲೆ ಕೆಡಿಸಿಕೊಂಡಿಗಲಿಲ್ಲ. ಆದರೆ ಮರುದಿನವೇ, “ಕಂಪ್ಯೂಟರ ಭಾಷಾ ಕಡ್ಡಾಯ ಕಲಿಕೆ, ಸಮಯ ಸಂಜೆ ಆರರಿಂದ ಎಂಟು” ಅನ್ನೋ ಫಲಕ ನೋಟಿಸು ಬೋರ್ಡಲ್ಲಿ ಬಂದು ಕೂತಾಗ ಕಕ್ಕಾಬಿಕ್ಕಿಯಾಗಿತ್ತು ಸಿಬ್ಬಂದಿ. ಅಸಲು ಅಮೆರಿಕ ರಿಟರ್ನ್ಡ್ ಅಂತ ಹಣೆಪಟ್ಟಿ ಕಟ್ಟಿಸಿಕೊಂಡ ಶೆಣೈಗೆ ಅಲ್ಲಿಯ ಶಿಕ್ಷಣತಂತ್ರಗಳ ಹುಚ್ಚು; ಆನಲೈನ್ ಪಾಠ ಹೇಳಿಸಿ ಮೊದಲೇ ಹೆಚ್ಚಿನ ವರ್ಕ್‌ಲೋಡಿಂದ ಹೈರಾಣಾದ ಲೆಕ್ಚರುಗಳನ್ನು ಇನ್ನೂ ಹಣಿವ ಹವಣಿಕೆ. ‘ವರ್ಷಕ್ಕೆ ಮೂರು ತಿಂಗಳು ರಜೆ ತೆಕ್ಕೋತಾರೆ, ಅದೂ ಗರಿಗರಿ ಸಂಬಳ ಎಣಿಸಿಕೊಂಡು, ದುಡೀಲಿ’ ಅಂತಾ ಒಂಥರಾ ಖುನ್ನಸ್ಸು! ಇದೆಲ್ಲಾ ಲೆಕ್ಚರರುಗಳಿಗೆ ಗೊತ್ತಿಲ್ಲ ಅಂತಲ್ಲ ಆದರೆ ತಲೆ ಹೇಗಿದ್ದರೂ ಹೆಡ್ಡು ಹೆಡ್ಡೇ ಅಲ್ವೆ? ಅಂತೂ ಎಲ್ಲ ಲೆಕ್ಚರರುಗಳೂ ಕಚೇರಿಯ ಸಿಬ್ಬಂದಿ, ಲೈಬ್ರರಿಯ ಜನವೂ ಕೋರ್ಸಿಗೆ ಹೆಸರು ನೋಂದಾಯಿಸಿಯಾಗಿತ್ತು, ಮೊದಲ ವಾರ ಕಮ್ಯುನಿಟಿ ಹಾಲು ತುಂಬುತ್ತೆ ತಿಂಗಳಲ್ಲಿ ಕೀಲಿ ಹಾಕ್ಕೊಳ್ಳುತ್ತೆ ಅನ್ನೋ ಎಲ್ಲರ ಅಂದಾಜು ಮೀರಿ ಬೆಳೆದಿತ್ತು ಕ್ಲಾಸಿನ ಹಾಜರಿಪಟ್ಟಿ. ಕೆಲ ಥಳಕು ಬಳಕಿನ ಡಿಗ್ರಿ ಕಾಲೇಜಿನ ಏರು ಜವ್ವನೆಯರು ಕೂಡಾ ಹಗೂರಾಗಿ ಬ್ಯಾಚು ಸೇರಿಕೊಂಡಿದ್ದರು. ಇದೆಲ್ಲದರ ಹಿಂದೆ ಇಪ್ಪತ್ತೈದರ ಸಿಕ್ಸ್ ಪ್ಯಾಕಿನ ಕಂಪ್ಯೂಟರ್ ಗುರು ನಿಖಿಲನಿದ್ದ ಎಂಬ ನಂಬಿಕೆ ಜೀವಿಕಾದು.

ಹೊಸದಾಗಿ ಸೇರಿದ್ದ ಬಾಟನಿ ಲೆಕ್ಚರರ್ ಸುಮಾ, ಆಫೀಸ್ ಅಸಿಸ್ಟೆಂಟು ನೀಲಿಮಾ ಎಲ್ಲ ನಿಖಿಲನ ಗಮನಕ್ಕೆ ಹಾತೊರೆದರೆ ಅಲೆದಲೆದು ಅವನ ಕಣ್ಣು ನಿಂತದ್ದು ತನ್ನ ಮೇಲೆಯೇ, ನೆನೆದು ಹೆಮ್ಮೆಯಿಂದ ಈಗಲೂ ಎದೆಯುಬ್ಬಿತವಳಿಗೆ. ವರ್ಕ್‌ಶಾಪು ಮುಗಿದ ಮೇಲೂ ಸುಮ್ಮನೆ, “ಹ್ಯಾಗೆ ನಡೆದಿದೆ ಸಂಗಣಕ ಭಾಷಾ ಪ್ರಾಕ್ಟೀಸು?” ಅಂತ ಆಗಾಗ ಸಂದೇಶ ಹಾಕುತ್ತಿದ್ದ. ನನ್ನ ಫೇಸ್‌ಬುಕ್ಕಿನ ಹಳೆಯ ಪೇಜುಗಳಿಗೂ ಕೂಡ ಅವನ ಕಮೆಂಟುಗಳ ಮಹಾಪೂರ! ‘ನಿಮ್ಮ ಪೋಸ್ಟ್ – ಮೀ ಟೂ ಎಂಬ ಬೂಟಾಟಿಕೆ’ – ಆರ್ಟಿಕಲ್ ಓದಿದೆ ಮೇಡಂ ಏನು ಜಾಡಿಸಿದ್ದೀರಾ ತಾರಾಮಣಿಗಳನ್ನ ಸೂಪರ್! ನೀವು ಫಿಸಿಕ್ಸ್ ಲೆಕ್ಚರರ್ ಅಂತ ನಂಬಿಕೇನೇ ಆಗೋಲ್ಲ. ಯು ಹ್ಯಾವ ಪೊಟೆನ್ಶಿಯಲ್ ಆಫ್ ಅ ಗ್ರೇಟ್ ಕ್ರಿಟಿಕ್” ಅಂತೆಲ್ಲ ಹಚ್ಚಿಕೊಂಡವ ಪುಷ್ಪ ಪ್ರದರ್ಶನದ ತನ್ನ ಯಾವುದೋ ಫೋಟೊಗೆ, ‘ಹೂವು ಹೂವನ್ನೇ ನೋಡಿತು’ ಅಂತ ಕಮೆಂಟು ಹಾಕುವಷ್ಟು ನಿರ್ಭಿಡೆಯಾಗಿದ್ದ. ಇವಳೂ ಉತ್ತರವಾಗಿ ಮೆತ್ತಗೆ ಒಂದು ನಗುಮುಖದ ಇಮೋಜಿ ಕಳಿಸತೊಡಗಿದಾಗ ಅವನ ಕಾವ್ಯಲಹರಿ ಮತ್ತೂ ಹುಚ್ಚುಹುಚ್ಚಾಗಿ ಕುಣಿದಿತ್ತು. “ತೀರಾ ಆಡ್ತಾನಪ್ಪಾ ಈ ನಿಖಿಲ” ಅಂತ ಕನ್ನಡ ಲೆಕ್ಚರರ್ ಲತಾಳಿಗೆ ಇವಳು ಡಬ್ಬ ತಿನ್ನುವಾಗ ನಿತ್ಯ ಹೇಳಬೇಕು; ಅವಳು ‘ಯೂ ಲಕೀ ಗರ್ಲ್’

